<u>**ಪತ್ರಿಕಾ ಪ್ರಕಟಣೆ**</u>

# ಬೆಂಗಳೂರಿನ ಸಗಟು ಆಭರಣ ವರ್ತಕರ ಮೇಲೆ ದಾಳಿ

## ವಾಣಿಜ್ಯ ತೆರಿಗೆಗಳ ಇಲಾಖೆಯಿಂದ ತೆರಿಗೆ ವಂಚಿತ 60 ಕೆ.ಜಿ ಚಿನ್ನಾಭರಣಗಳ ಪತ್ತೆ

ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಯ ಬೆಂಗಳೂರಿನ ದಕ್ಷಿಣ ವಿಭಾಗದ ಜಾರಿ ಅಧಿಕಾರಿಗಳು ದಿನಾಂಕ:25.02.2020ರಂದು ಬೆಂಗಳೂರಿನ ರಂಗನಾಥ ಮ್ಯಾನ್ಷನ್ ಹಾಗೂ ಮತ್ತು ಸಕಾಲಾಜಿ ಮಾರ್ಕೆಟ್, ಚಿಕ್ಕಪೇಟೆ, ಇಲ್ಲಿನ ಸಗಟು ಆಭರಣ ವರ್ತಕರುಗಳ ವ್ಯಾಪಾರ ಸ್ಥಳಗಳ ಮೇಲೆ ದಿಢೀರ್ ದಾಳಿ ನಡೆಸಿ ತಪಾಸಣೆಗಳನ್ನು ಕೈಗೊಂಡಿರುತ್ತಾರೆ. ಈ ದಾಳಿಯು ಕರ್ನಾಟಕದ ಎನ್‌ಐಸಿಯು ಸಿದ್ಧಪಡಿಸಿದ ವಿದ್ಯುನ್ಮಾನ ವ್ಯವಸ್ಥೆಯಲ್ಲಿನ ದತ್ತಾಂಶ ವಿಶ್ಲೇಷಣೆ ಹಾಗೂ ಖಚಿತ ಮಾಹಿತಿಯ ಆಧಾರದ ಮೇಲೆ ಕೈಗೊಳ್ಳಲಾಗಿದೆ. ಜಾರಿ ವಿಭಾಗವು ಈ ***ದಾಳಿಯಿಂದ 60 ಕೆ.ಜಿ ಮೌಲ್ಯದ ತೆರಿಗೆ ವಂಚಿತ ಚಿನ್ನಾಭರಣಗಳನ್ನು ಪತ್ತೆ ಹಚ್ಚಿದ್ದು, ಇದಕ್ಕೆ ಸಂಬಂಧಿಸಿದಂತೆ, ರೂ.13 ಕೋಟಿ ಜಿಎಸ್‌ಟಿ ತೆರಿಗೆ ವಂಚನೆಯಾಗಿರುತ್ತದೆ.***



ಬೇರೆ ರಾಜ್ಯಗಳಿಂದ ವರ್ತಕರು ಯಾವುದೇ ದಾಖಲೆಗಳಿಲ್ಲದೆ ಹಾಗೂ ಬಿಲ್ಲುಗಳಿಲ್ಲದೆ, ನಗರಕ್ಕೆ ಭೇಟಿ ನೀಡಿ ಸ್ಥಳೀಯ ಆಭರಣ ವರ್ತಕರುಗಳಿಗೆ ಚಿನ್ನಾಭರಣಗಳನ್ನು ನೀಡುತ್ತಾರೆ ಎಂಬ ಮಾಹಿತಿಯ ಆಧಾರದ ಮೇಲೆ ಈ ದಾಳಿಗಳನ್ನು ನಡೆಸಲಾಗಿದೆ. ಅಧಿಕಾರಿಗಳು ***23 ಆಭರಣ ವರ್ತಕರುಗಳ ವ್ಯಾಪಾರ ಸ್ಥಳಗಳಿಗೆ ದಾಳಿ ನಡೆಸಿ ದಾಖಲೆಗಳಿಲ್ಲದ 60 ಕೆ.ಜಿ ಮೌಲ್ಯದ ಚಿನ್ನಾಭರಣಗಳನ್ನು ದಾಸ್ತಾನಿನಲ್ಲಿ ಹೊಂದಿರುವುದನ್ನು ಪತ್ತೆಹಚ್ಚಿರುತ್ತಾರೆ.*** ದಾಖಲೆಗಳಿಲ್ಲದ ಆಭರಣಗಳಿಗೆ ಸಂಬಂಧಿಸಿದ ದಂಡವನ್ನು ವಿಧಿಸಲಾಗಿದೆ. ಮುಂದುವರಿದಂತೆ, ತಪಾಸಣೆ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ದಾಖಲೆಗಳಿಲ್ಲದ 3.5 ಕೆ.ಜಿ ಚಿನ್ನಾಭರಣಗಳನ್ನು ತಮ್ಮ ಚೀಲಗಳಲ್ಲಿ ಸಾಗಿಸುತ್ತಿದ್ದುದನ್ನು ಪತ್ತೆಹಚ್ಚಿ ಇದಕ್ಕೆ ಸಂಬಂಧಿಸಿದಂತೆ ದಂಡವನ್ನು ವಿಧಿಸಿರುತ್ತಾರೆ. ಡಿಸೆಂಬರ್ 2019ರ ತಿಂಗಳನಲ್ಲಿಯೂ ಇಂತಹುದೇ ತಪಾಸಣೆಗಳನ್ನು ಬೆಳ್ಳಿ ಆಭರಣಗಳ ವರ್ತಕರ ಮೇಲೆ ಬೆಂಗಳೂರಿನ ರಾಜಾ ಮಾರ್ಕೆಟ್‌ನಲ್ಲಿ ಕೈಗೊಳ್ಳಲಾಗಿತ್ತು.

ಜಾರಿ ವಿಭಾಗವು ಅಂತರರಾಜ್ಯ ಚಿನ್ನ ಮತ್ತು ಬೆಳ್ಳಿಯ ಸಾಗಾಟದ ಮೇಲೆ ತೀವ್ರ ನಿಗಾ ವಹಿಸಿದ್ದು, ರಾಜ್ಯದ ಎಲ್ಲಾ ವರ್ತಕರು ಯಾವುದೇ ಅಧಿಕೃತ ಖರೀದಿ ಬಿಲ್ಲುಗಳಿಲ್ಲದ ಸರಕುಗಳನ್ನು ಕೊಳ್ಳಬಾರದೆಂದು ಈ ಮೂಲಕ ಕೋರಲಾಗಿದೆ.

(ಶ್ರೀಕರ್ ಎಂ.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.